# ಲಯವಾದ್ಯಪ್ರಿಯ ಪ್ರಜ್ವಲ್

ಈ ಎಂಜಿನಿಯರಿಂಗ್ ಹುಡುಗನಿಗೆ ತಬಲಾ ವಾದ್ಯದ ಮೇಲೆ ಎಲ್ಲಿಲ್ಲದ ಪ್ರೀತಿ. ಮನೆಯಲ್ಲಿ ತಂದೆ ಹವ್ಯಾಸಕ್ಕಾಗಿ ನುಡಿಸುತ್ತಿದ್ದ ತಬಲಾ ಬೋಲ್‌ಗಳನ್ನು ಪುಟ್ಟ ಮಗುವಿದ್ದಾಗಿನಿಂದಲೂ ಆಲಿಸುತ್ತಾ ತಾನೂ ಈ ಅವನದ್ಧ ವಾದ್ಯದಲ್ಲಿ ಅಭಿರುಚಿ ಬೆಳೆಸಿಕೊಂಡ. ಹಿರಿಯ ತಬಲಾ ವಾದಕರ ಲಯವಾದ್ಯ ತಂತ್ರಗಾರಿಕೆ ಕಂಡು ಅಚ್ಚರಿಪಟ್ಟ. ತಾನೂ ತಬಲಾ ಕಲಿಯಬೇಕೆಂದು ಪಣತೊಟ್ಟ. ಜೊತೆಗೆ ತಬಲಾ ವಾದನದಲ್ಲಿ ಆದಷ್ಟು ಬೇಗ 'ರಿಂಪಾ ಶಿವ' (ಅಂತರರಾಷ್ಟ್ರೀಯ ಮಟ್ಟದ ಯುವ ತಬಲಾ ವಾದಕಿ) ಆಗಬೇಕು ಎಂಬ ಮಹದಾಸೆಯನ್ನು ಇಟ್ಟುಕೊಂಡು ತಬಲಾ–ಡಗ್ಗಾಗಳ ಮೇಲೆ ಕೈಬೆರಳುಗಳನ್ನಾಡಿಸುತ್ತಲೇ ತೀನ್‌ತಾಲ್, ಝಪ್‌ತಾಲ್ ಜಪ ಮಾಡಲಾರಂಭಿಸಿದ. ಇದೀಗ ಎಂಜಿನಿಯರಿಂಗ್ ಕಾಲೇಜು ಮೆಟ್ಟಿಲು ಏರಿ ಎರಡು ವರ್ಷಗಳಾಗುತ್ತಾ ಬಂದಿದೆ. ಆದರೂ ಲಯ ಜ್ಞಾನ, ನುಡಿಸಾಣಿಕೆಯಲ್ಲಿ ಇನ್ನೂ ಎತ್ತರೆತ್ತರಕ್ಕೇರುವ ಎಲ್ಲ ಲಕ್ಷಣಗಳನ್ನೂ ತೋರಿಸುತ್ತಲೇ ಇದ್ದಾನೆ.

ಪ್ರಜ್ವಲ್ ನಾಗಭೂಷಣ ಶರ್ಮಾ... ತಬಲಾ ವಾದನದಲ್ಲಿ ಭರವಸೆಯ ಛಾಪು ಮೂಡಿಸುತ್ತಿರುವ ಉದಯೋನ್ಮುಖ ಪ್ರತಿಭೆ. ತಂದೆ ಕೆನರಾ ಬ್ಯಾಂಕ್ ಉದ್ಯೋಗಿ ನಾಗಭೂಷಣ ಶರ್ಮಾ. ಪ್ರವೃತ್ತಿಯಲ್ಲಿ ತಬಲಾ ವಾದಕರು ಕೂಡ. ಬೆಂಗಳೂರಿನ ಕೋಣನಕುಂಟೆಯಲ್ಲಿರುವ ಪ್ರಜ್ವಲ್, ನಾಡಿನ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ತನ್ನ ಕೈಚಳಕ ತೋರಿಸಿದ್ದಾನೆ. ಸಾಂಸ್ಕೃತಿಕ ಉತ್ಸವಗಳಲ್ಲಿ, ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿ ಹಿರಿಯ ತಬಲಾ ವಾದಕರಿಂದಲೂ ಮೆಚ್ಚುಗೆ ಗಳಿಸಿದ್ದಾನೆ.

ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ ತಾಳವಾದ್ಯ ಜೂನಿಯರ್ ಹಾಗೂ ಸೀನಿಯರ್ ಗ್ರೇಡ್ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ, ಮುಂಬಯಿ ವಿವಿಧ ಹಂತಗಳ 'ಪ್ರಾರಂಭಿಕ'ದಿಂದ 'ವಿಶಾರದ ಪ್ರಥಮ' – ಹೀಗೆ ಒಟ್ಟು ಆರು ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕ ಪಡೆದು ತಬಲಾದಲ್ಲಿ ಅಕಡೆಮಿಕ್ ಆಗಿಯೂ ಬುದ್ಧಿವಂತನೆನಿಸಿಕೊಂಡಿದ್ದಾನೆ.

ಇವನ ಈ ಎಲ್ಲ ಸಾಧನೆಗೆ ಬೆನ್ನುಲುಬಾಗಿ ಪ್ರೋತ್ಸಾಹ ನೀಡುವವರು ಈತನ ಗುರುಗಳಾದ ಪಂ. ವಿ.ಎಂ. ನಾಗರಾಜ್, ಸತೀಶ್ ಹಂಪಿಹೊಳಿ ಹಾಗೂ ಅಮೃತೇಶ್ ಕುಲಕರ್ಣಿ. ಜೊತೆಗೆ ತಾಯಿ ವಿ. ಪದ್ಮಶ್ರೀ ಕೂಡ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ 'ಕಲಾ ಪ್ರತಿಭೋತ್ಸವ'ದಲ್ಲಿ ಪ್ರಜ್ವಲ್ ತಬಲಾ ಸೋಲೊ ರಂಜಿಸಿದೆ. ಇದೇ ಇಲಾಖೆ ವತಿಯಿಂದ ನಡೆದ 'ಚಿಗುರು' ಸಾಂಸ್ಕೃತಿಕ ವೇದಿಕೆಯಲ್ಲಿ, ಬಾಲಭವನದಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ, ವಿದ್ಯಾರಣ್ಯ ಯುವಕ ಸಂಘದ ಗಣೇಶೋತ್ಸವ ಸಾಂಸ್ಕೃತಿಕ ವೇದಿಕೆಯಲ್ಲಿ, ಸದ್ಗುರು ಸಂಗೀತ ಅಕಾಡೆಮಿ ವೇದಿಕೆಯಲ್ಲಿ, ಕೋಟೆ ರಾಮಸೇವಾ ಮಂಡಳಿಯ ಪ್ರತಿಷ್ಠಿತ ರಾಮೋತ್ಸವದಲ್ಲಿ, ನಾದವಾಹಿನಿ ಸಂಗೀತ ಸಭಾದಲ್ಲಿ, ಸಪ್ತಕ ವೇದಿಕೆಯಲ್ಲಿ ಪ್ರಜ್ವಲ್ ತಬಲಾ ಸೋಲೊ ಅನುರಣಿಸಿದೆ.



### ಪ್ರಶಸ್ತಿಗಳು

ಕೆನರಾ ಬ್ಯಾಂಕ್‌ನಿಂದ ಕೊಡುವ 'ಬಾಲಪ್ರತಿಭೆ' ಪ್ರಶಸ್ತಿ, ಆರ್ಯಭಟ ಯುವ ಅಂತರರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ಸರ್ಕಾರ ನಮ್ಮ ನಾಡಿನ ಪ್ರತಿಭೆಗಳನ್ನು ಆಯ್ಕೆ ಮಾಡಿ ಶಿಫಾರಸು ಮಾಡಿದ್ದ 'ನ್ಯಾಷನಲ್ ಚೈಲ್ಡ್ ಅವಾರ್ಡ್ 2017'ರಲ್ಲಿ ಪ್ರಜ್ವಲ್‌ಗೆ ಲಭಿಸಿದೆ.

ತಬಲಾ ವಾದನದಲ್ಲಿ ಭರವಸೆಯ ಛಾಪು ಮೂಡಿಸುತ್ತಿರುವ ಯುವ ಪ್ರತಿಭಾನ್ವಿತ ಕಲಾವಿದ ಪ್ರಜ್ವಲ್ ನಾಗಭೂಷಣ ಶರ್ಮಾ ನಾದಜಗತ್ತಿನಲ್ಲಿ ಇನ್ನಷ್ಟು ಎತ್ತರಕ್ಕೇರಲಿ ಎಂಬುದೇ ನಮ್ಮ ಹಾರೈಕೆ.

■ ಯು. ವೇಣೂರು

